ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಪಾಸ್‌ಪೋರ್ಟ್ ಅಧಿನಿಯಮ, 1967

(1967ರ ಅಧಿನಿಯಮ ಸಂಖ್ಯೆ 15)

[ನವೆಂಬರ್ 11, 2021 ರಂದು ಇದ್ದಂತೆ]

# THE PASSPORTS ACT, 1967

## (Act No.15 OF 1967)

**[As on 11th November 2021]**

# ಮುನ್ನುಡಿ

ದಿ ಪಾಸ್‌ಪೋರ್ಟ್ಸ್ ಆ್ಯಕ್ಟ್, 1967 (ಆ್ಯಕ್ಟ್ ನಂ.15 ಆಫ್ 1967) – ಇದಕ್ಕೆ ದಿನಾಂಕ:17.08.2021 ರಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳ ಅನುಮೋದನೆ ದೊರೆತಿದ್ದು, ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು ದಿನಾಂಕ:11–11–2021 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 51ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 01 ರಿಂದ 14 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಡಾ. ರೀಟಾ ವಸಿಷ್ಠ
ಕಾರ್ಯದರ್ಶಿ
ಭಾರತ ಸರ್ಕಾರ

# PREFACE

This edition of THE PASSPORTS ACT, 1967 (ACT NO. 15 OF 1967) which has been approved by His Excellency the President of India on 17.08.2021 contains the authoritative text of that Act in Kannada and it was published in the Gazette of India Extraordinary, Part IX, Section 1, No.1, Vol.51, dated 11-11-2021 from pages 01 to 14.

This Kannada Text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

Dr. Reeta Vasishta
Secretary
Government of India

# ಪಾಸ್‌ಪೋರ್ಟ್ ಅಧಿನಿಯಮ, 1967

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು :


1. ಚಿಕ್ಕ ಹೆಸರು ಮತ್ತು ವ್ಯಾಪ್ತಿ

2. ಪರಿಭಾಷೆಗಳು

3. ಭಾರತದಿಂದ ಹೊರಡುವುದಕ್ಕೆ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು

4. ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ವರ್ಗಗಳು

5. ಪಾಸ್‌ಪೋರ್ಟ್‌ಗಳಿಗೆ, ಪ್ರಯಾಣದ ದಸ್ತಾವೇಜುಗಳಿಗೆ ಅರ್ಜಿಗಳು, ಇತ್ಯಾದಿ ಮತ್ತು ಅವುಗಳ ಮೇಲೆ ಆದೇಶಗಳು.

6. ಪಾಸ್‌ಪೋರ್ಟ್‌ಗಳನ್ನು, ಪ್ರಯಾಣದ ದಸ್ತಾವೇಜುಗಳನ್ನು ನೀಡಲು ನಿರಾಕರಿಸುವುದು, ಇತ್ಯಾದಿ

7. ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಅವಧಿ

8. ಪಾಸ್‌ಪೋರ್ಟ್ ಅವಧಿಯ ವಿಸ್ತರಣೆ

9. ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಷರತ್ತುಗಳು ಮತ್ತು ನಮೂನೆಗಳು

10. ಪಾಸ್‌ಪೋರ್ಟ್‌ಗಳನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ವ್ಯತ್ಯಸ್ಥಗೊಳಿಸುವುದು, ವಶಪಡಿಸಿಕೊಳ್ಳುವುದು ಮತ್ತು ರದ್ದುಪಡಿಸುವುದು

10ಎ. ಕೆಲವು ಸಂದರ್ಭಗಳಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ಅಮಾನತ್ತುಗೊಳಿಸುವುದು

10ಬಿ. ಸೂಚನೆಗಳ ಮಾನ್ಯೀಕರಣ

11. ಅಪೀಲುಗಳು

12. ಅಪರಾಧಗಳು ಮತ್ತು ದಂಡನೆಗಳು

13. ಬಂಧಿಸಲು ಅಧಿಕಾರ

14. ಶೋಧನೆ ಮಾಡಲು ಮತ್ತು ವಶಪಡಿಸಿಕೊಳ್ಳಲು ಅಧಿಕಾರ

15. ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯು ಅಗತ್ಯ

16. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

17. ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೇಂದ್ರ ಸರ್ಕಾರದ ಸ್ವತ್ತಾಗಿರುವುದು

18. [ಬಿಟ್ಟು ಬಿಡಲಾಗಿದೆ]

19. ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೆಲವು ದೇಶಗಳಿಗೆ ಪ್ರಯಾಣಿಸುವುದಕ್ಕೆ ಅಮಾನ್ಯವಾಗಿರುವುದು

20. ಭಾರತದ ನಾಗರಿಕರಾಗಿಲ್ಲದ ವ್ಯಕ್ತಿಗಳಿಗೆ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ನೀಡುವುದು

21. ವಹಿಸಿಕೊಡಲು ಅಧಿಕಾರ

22. ವಿನಾಯಿತಿ ನೀಡಲು ಅಧಿಕಾರ

23. ಅಧಿನಿಯಮವು ಕೆಲವು ಅಧಿನಿಯಮಿತಿಗಳ ಜೊತೆಗೆ ಇರುವುದು

24. ನಿಯಮಗಳನ್ನು ರಚಿಸಲು ಅಧಿಕಾರ

25. 1920ರ ಅಧಿನಿಯಮ 34ರ ಚಿಕ್ಕ ಹೆಸರಿನ ಬದಲಾವಣೆ

26. [ಬಿಟ್ಟು ಬಿಡಲಾಗಿದೆ]

27. ನಿರಸನ ಮತ್ತು ಉಳಿಸುವಿಕೆ.

********

# ಪಾಸ್‌ಪೋರ್ಟ್ ಅಧಿನಿಯಮ, 1967

## (1967ರ ಅಧಿನಿಯಮ ಸಂಖ್ಯೆ 15)

[24ನೇ ಜೂನ್, 1967.]

ಭಾರತದ ನಾಗರಿಕರು ಮತ್ತು ಇತರ ವ್ಯಕ್ತಿಗಳು ಭಾರತದಿಂದ ಹೊರಡುವುದನ್ನು ವಿನಿಯಮಿಸುವುದಕ್ಕೆ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಮತ್ತು ಅದಕ್ಕೆ ಪ್ರಾಸಂಗಿಕವಾದ ಅಥವಾ ಸುಸಂಗತವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಹದಿನೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ಪಾಸ್‌ಪೋರ್ಟ್ ಅಧಿನಿಯಮ, 1967 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಭಾರತದ ನಾಗರಿಕರಿಗೆ ಸಹ ಅನ್ವಯವಾಗುತ್ತದೆ.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ತನ್ನ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ "ಹೊರಡುವುದು" ಎಂದರೆ, ಜಲಮಾರ್ಗದ, ಭೂಮಾರ್ಗದ ಅಥವಾ ವಾಯುಮಾರ್ಗದ ಮೂಲಕ ಭಾರತದಿಂದ ಹೊರಡುವುದು;

(ಬಿ) "ಪಾಸ್‌ಪೋರ್ಟ್" ಎಂದರೆ, ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆಯೆಂದು ಭಾವಿಸಲಾದ ಪಾಸ್‌ಪೋರ್ಟ್;

(ಸಿ) "ಪಾಸ್‌ಪೋರ್ಟ್ ಪ್ರಾಧಿಕಾರ" ಎಂದರೆ, ಪಾಸ್‌ಪೋರ್ಟ್‌ಗಳನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ನೀಡುವುದಕ್ಕೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿ ಅಥವಾ ಪ್ರಾಧಿಕಾರಿ ಮತ್ತು ಇದರಲ್ಲಿ ಕೇಂದ್ರ ಸರ್ಕಾರವು ಒಳಗೊಳ್ಳುತ್ತದೆ;

(ಡಿ) "ನಿಯಮಿಸಲಾದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಇ) "ಪ್ರಯಾಣದ ದಸ್ತಾವೇಜು" ಎಂದರೆ, ಈ ಅಧಿನಿಯಮದ ಮೇರೆಗೆ ನೀಡಲಾದ ಅಥವಾ ನೀಡಲಾಗಿದೆಯೆಂದು ಭಾವಿಸಲಾದ ಪ್ರಯಾಣದ ದಸ್ತಾವೇಜು.

3. **ಭಾರತದಿಂದ ಹೊರಡುವುದಕ್ಕೆ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು.**- ಯಾರೇ ವ್ಯಕ್ತಿಯು ಈ ಬಗ್ಗೆ ಸಿಂಧುವಾದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಹೊಂದಿದ್ದ ಹೊರತು ಭಾರತದಿಂದ ಹೊರಡತಕ್ಕದ್ದಲ್ಲ ಅಥವಾ ಹೊರಡುವ ಪ್ರಯತ್ನವನ್ನು ಮಾಡತಕ್ಕದ್ದಲ್ಲ.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಪಾಸ್‌ಪೋರ್ಟ್"ನಲ್ಲಿ, ಪಾಸ್‌ಪೋರ್ಟ್ ಯಾವ ಪಾಸ್‌ಪೋರ್ಟ್‌ಗಳ ವರ್ಗಕ್ಕೆ ಸೇರಿದೆಯೋ ಆ ವರ್ಗಕ್ಕೆ ಸಂಬಂಧಿಸಿದಂತೆ, ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34)ರ ಮೇರೆಗೆ ನಿಯಮಿಸಲಾದ ಷರತ್ತುಗಳನ್ನು ಈಡೇರಿಸುವ ವಿದೇಶದ ಸರ್ಕಾರವು ಅಥವಾ ಅದರ ಅಧಿಕಾರದ ಮೇರೆಗೆ ನೀಡುವಂತಹ ಪಾಸ್‌ಪೋರ್ಟ್ ಒಳಗೊಳ್ಳುತ್ತದೆ;

(ಬಿ) "ಪ್ರಯಾಣದ ದಸ್ತಾವೇಜು" ನಿಯಮಿಸಲಾದ ಷರತ್ತುಗಳನ್ನು ಈಡೇರಿಸುವ ವಿದೇಶದ ಸರ್ಕಾರವು ಅಥವಾ ಅದರ ಅಧಿಕಾರದ ಮೇರೆಗೆ ನೀಡುವಂಥ ಪ್ರಯಾಣದ ದಸ್ತಾವೇಜನ್ನು ಒಳಗೊಳ್ಳುತ್ತದೆ.

4. **ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ವರ್ಗಗಳು.**- (1) ಈ ಅಧಿನಿಯಮದ ಮೇರೆಗೆ ಈ ಮುಂದಿನ ವರ್ಗಗಳ ಪಾಸ್‌ಪೋರ್ಟ್‌ಗಳನ್ನು ನೀಡಬಹುದು, ಎಂದರೆ:-

(ಎ) ಸಾಮಾನ್ಯ ಪಾಸ್‌ಪೋರ್ಟ್;

(ಬಿ) ಅಧಿಕೃತ ಪಾಸ್‌ಪೋರ್ಟ್;

(ಸಿ) ರಾಜತಾಂತ್ರಿಕ ಪಾಸ್‌ಪೋರ್ಟ್.

(2) ಈ ಅಧಿನಿಯಮದ ಮೇರೆಗೆ ಈ ಮುಂದಿನ ವರ್ಗಗಳ ಪ್ರಯಾಣದ ದಸ್ತಾವೇಜುಗಳನ್ನು ನೀಡಬಹುದು, ಎಂದರೆ:-

(ಎ) ಭಾರತದೊಳಗೆ ಪ್ರವೇಶಿಸಲು ವ್ಯಕ್ತಿಗೆ ಅಧಿಕಾರ ನೀಡುವ ತುರ್ತು ಪ್ರಮಾಣಪತ್ರ;

(ಬಿ) ವ್ಯಕ್ತಿಯ ಗುರುತನ್ನು ದೃಢಪಡಿಸುವ ಉದ್ದೇಶಕ್ಕಾಗಿ ನೀಡುವ ಗುರುತಿನ ಪ್ರಮಾಣಪತ್ರ;

(ಸಿ) ನಿಯಮಿಸಬಹುದಾದಂತಹ ಇತರ ಪ್ರಮಾಣಪತ್ರ ಅಥವಾ ದಸ್ತಾವೇಜು.

(3) ಕೇಂದ್ರ ಸರ್ಕಾರವು, ಈ ಬಗ್ಗೆ ತಾನು ಅನುಸರಿಸುವ ಆಚರಣೆಗೆ ಮತ್ತು ಪದ್ಧತಿಗೆ ಅನುಗುಣವಾಗಿ, ಯಾವ ವ್ಯಕ್ತಿಗಳ ವರ್ಗಕ್ಕೆ (1)ನೇ ಉಪಪ್ರಕರಣದಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ಅನುಕ್ರಮವಾಗಿ ಉಲ್ಲೇಖಿಸಿದ ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ವರ್ಗಗಳನ್ನು ಈ ಅಧಿನಿಯಮದ ಮೇರೆಗೆ ನೀಡಬಹುದೋ ಆ ವ್ಯಕ್ತಿಗಳ ವರ್ಗಗಳನ್ನು ನಿಯಮಿಸತಕ್ಕದ್ದು.

5. **ಪಾಸ್‌ಪೋರ್ಟ್‌ಗಳಿಗೆ, ಪ್ರಯಾಣದ ದಸ್ತಾವೇಜುಗಳಿಗೆ ಅರ್ಜಿಗಳು, ಇತ್ಯಾದಿ ಮತ್ತು ಅವುಗಳ ಮೇಲೆ ಆದೇಶಗಳು.**- (1) ಅರ್ಜಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿದೇಶಕ್ಕೆ ಅಥವಾ ವಿದೇಶಗಳಿಗೆ (ಹೆಸರಿಸಿದ ವಿದೇಶವಲ್ಲದ) ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟನ್ನು ನೀಡುವುದಕ್ಕಾಗಿ ಅರ್ಜಿಯನ್ನು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು ವಿಶೇಷ ಭದ್ರತಾ ಪತ್ರ, ಮುದ್ರಣ, ಲ್ಯಾಮಿನೇಶನ್ ಮತ್ತು ಪಾಸ್‌ಪೋರ್ಟ್‌ಗಳನ್ನು ಮತ್ತು ಇತರ ಪ್ರಯಾಣದ ದಸ್ತಾವೇಜುಗಳನ್ನು ನೀಡುವುದಕ್ಕೆ ಸಂಬಂಧಿಸಿದ ಇತರ ವಿವಿಧ ಸೇವೆಗಳ ಮೇಲಿನ ವೆಚ್ಚಗಳನ್ನು ಭರಿಸುವುದಕ್ಕಾಗಿ ನಿಯಮಿಸಬಹುದಾದಂತಹ ಫೀಜು ಅರ್ಜಿಯ ಜೊತೆಗಿರತಕ್ಕದ್ದು.

**ವಿವರಣೆ.**- ಈ ಪ್ರಕರಣದಲ್ಲಿ, "ಹೆಸರಿಸಿದ ವಿದೇಶ" ಎಂದರೆ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ, ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ವಿದೇಶ.

(1ಎ) ಅರ್ಜಿಯನ್ನು,-

(i) ಹೆಸರಿಸಿದ ವಿದೇಶಕ್ಕೆ ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟನ್ನು ನೀಡುವುದಕ್ಕಾಗಿ; ಅಥವಾ

(ii) ಅರ್ಜಿಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ವಿದೇಶಕ್ಕೆ ಅಥವಾ ವಿದೇಶಗಳಿಗೆ (ಹೆಸರಿಸಿದ ವಿದೇಶವೂ ಒಳಗೊಂಡಂತೆ) ಭೇಟಿ ನೀಡಲು ಈ ಅಧಿನಿಯಮದ ಮೇರೆಗೆ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಅಥವಾ ಈ ಪ್ರಕರಣದಲ್ಲಿ ಉಲ್ಲೇಖಿಸಿದ ಪಾಸ್‌ಪೋರ್ಟಿನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹ ಮಾಡುವುದಕ್ಕಾಗಿ ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಸಲ್ಲಿಸಬಹುದು ಮತ್ತು ನಿಯಮಿಸಬಹುದಾದಂತೆ ಐವತ್ತು ರೂಪಾಯಿಗಳನ್ನು ಮೀರದಂಥ ಫೀಜು, (ಯಾವುದಾದರೂ ಇದ್ದರೆ) ಅರ್ಜಿಯ ಜೊತೆಗಿರತಕ್ಕದ್ದು.

(1ಬಿ) ಈ ಪ್ರಕರಣದ ಮೇರೆಗೆ ಸಲ್ಲಿಸುವ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂತಹ ನಮೂನೆಯಲ್ಲಿರತಕ್ಕದ್ದು ಮತ್ತು ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪಾಸ್‌ಪೋರ್ಟ್ ಪ್ರಾಧಿಕಾರವು, ತಾನು ಅವಶ್ಯವೆಂದು ಪರಿಗಣಿಸಬಹುದಾದಂತಹ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ನಡೆಸಿದ ನಂತರ, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಲಿಖಿತ ಆದೇಶದ ಮೂಲಕ,–

(ಎ) ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ವಿದೇಶಕ್ಕೆ ಅಥವಾ ವಿದೇಶಗಳಿಗೆ ಸಂಬಂಧಿಸಿದಂತೆ, ಹಿಂಬರಹದೊಂದಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ನೀಡತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟ್‌ನ ಮೇಲೆ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹವನ್ನು ಮಾಡತಕ್ಕದ್ದು; ಅಥವಾ

(ಬಿ) ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ವಿದೇಶಗಳಿಗೆ ಸಂಬಂಧಿಸಿದಂತೆ, ಹಿಂಬರಹದೊಂದಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹವನ್ನು ಮಾಡತಕ್ಕದ್ದು ಮತ್ತು ಇತರ ದೇಶಕ್ಕೆ ಅಥವಾ ದೇಶಗಳಿಗೆ ಸಂಬಂಧಿಸಿದಂತೆ ಹಿಂಬರಹ ಮಾಡಲು ನಿರಾಕರಿಸತಕ್ಕದ್ದು; ಅಥವಾ

(ಸಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ನಿರಾಕರಿಸತಕ್ಕದ್ದು ಅಥವಾ ಸಂದರ್ಭಾನುಸಾರ ಪಾಸ್‌ಪೋರ್ಟ್‌ನ ಮೇಲೆ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಯಾವುದೇ ಹಿಂಬರಹವನ್ನು ಮಾಡಲು ನಿರಾಕರಿಸತಕ್ಕದ್ದು.

(3) ಯಾರೇ ವ್ಯಕ್ತಿಯ ಅರ್ಜಿಯ ಮೇಲೆ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಪಾಸ್‌ಪೋರ್ಟ್ ಪ್ರಾಧಿಕಾರವು ಆದೇಶವನ್ನು ಮಾಡಿದಲ್ಲಿ, ಅಂತಹ ಆದೇಶವನ್ನು ಮಾಡಿದ್ದಕ್ಕೆ ತನ್ನ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಯಾವುದೇ ಪ್ರಕರಣದಲ್ಲಿ, ಅದರ ಪ್ರತಿಯನ್ನು ಒದಗಿಸುವುದರಿಂದ ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ, ಭಾರತದ ಭದ್ರತೆಗೆ, ಯಾವುದೇ ವಿದೇಶದೊಂದಿಗೆ ಭಾರತದ ಸ್ನೇಹ ಸಂಬಂಧಗಳಿಗೆ ಅಥವಾ ಸಾರ್ವಜನಿಕರ ಹಿತಾಸಕ್ತಿಗಳಿಗೆ ಬಾಧಕವುಂಟಾಗುವುದೆಂದು ಪಾಸ್‌ಪೋರ್ಟ್ ಪ್ರಾಧಿಕಾರವು ಅಭಿಪ್ರಾಯಪಟ್ಟ ಹೊರತು, ಆ ಆದೇಶದ ಪ್ರತಿಯನ್ನು ಆ ವ್ಯಕ್ತಿಯು ಕೇಳಿದಾಗ ಆತನಿಗೆ ಒದಗಿಸತಕ್ಕದ್ದು.

6. **ಪಾಸ್‌ಪೋರ್ಟ್‌ಗಳನ್ನು, ಪ್ರಯಾಣದ ದಸ್ತಾವೇಜುಗಳನ್ನು ನೀಡಲು ನಿರಾಕರಿಸುವುದು, ಇತ್ಯಾದಿ.**- (1) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಪಾಸ್‌ಪೋರ್ಟ್ ಪ್ರಾಧಿಕಾರವು, 5ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗೆ ಯಾವುದೇ ವಿದೇಶಕ್ಕೆ ಭೇಟಿ ನೀಡಲು ಹಿಂಬರಹವನ್ನು ಮಾಡುವುದಕ್ಕೆ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ, ಎಂದರೆ:-

(ಎ) ಅರ್ಜಿದಾರನು, ಅಂತಹ ದೇಶದಲ್ಲಿ, ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ ಪ್ರತಿಕೂಲಕರವಾದ ಚಟುವಟಿಕೆಗಳಲ್ಲಿ ನಿರತನಾಗಬಹುದು ಅಥವಾ ನಿರತನಾಗುವ ಸಂಭವ ಇದೆ ಎಂಬ;

(ಬಿ) ಅಂತಹ ದೇಶದಲ್ಲಿ ಅರ್ಜಿದಾರನಿರುವುದು ಭಾರತದ ಭದ್ರತೆಗೆ ಬಾಧಕವಾಗಬಹುದು ಅಥವಾ ಬಾಧಕವಾಗುವ ಸಂಭವ ಇದೆ ಎಂಬ;

(ಸಿ) ಅಂತಹ ದೇಶದಲ್ಲಿ ಅರ್ಜಿದಾರನಿರುವುದು, ಆ ದೇಶದೊಂದಿಗಿನ ಅಥವಾ ಯಾವುದೇ ಇತರ ದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡಬಹುದು ಅಥವಾ ಉಂಟು ಮಾಡುವ ಸಂಭವ ಇದೆ ಎಂಬ;

(ಡಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅರ್ಜಿದಾರನು ಅಂತಹ ದೇಶದಲ್ಲಿ ಇರುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ ಎಂಬ

– ಕಾರಣದ ಅಥವಾ ಕಾರಣಗಳ ಮೇಲೆ ನಿರಾಕರಿಸತಕ್ಕದ್ದೇ ಹೊರತು, ಯಾವುದೇ ಇತರ ಕಾರಣಗಳ ಮೇಲೆ ಅಲ್ಲ.

(2) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಪಾಸ್‌ಪೋರ್ಟ್ ಪ್ರಾಧಿಕಾರವು, 5ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಯಾವುದೇ ವಿದೇಶಕ್ಕೆ ಭೇಟಿ ನೀಡಲು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ, ಎಂದರೆ:–

(ಎ) ಅರ್ಜಿದಾರನು ಭಾರತದ ನಾಗರಿಕನಲ್ಲ ಎಂಬ;

(ಬಿ) ಅರ್ಜಿದಾರನು ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ ಪ್ರತಿಕೂಲಕರವಾದ ಚಟುವಟಿಕೆಗಳಲ್ಲಿ ಭಾರತದ ಹೊರಗೆ ನಿರತನಾಗಬಹುದು ಅಥವಾ ನಿರತನಾಗುವ ಸಂಭವ ಇದೆ ಎಂಬ;

(ಸಿ) ಅರ್ಜಿದಾರನು ಭಾರತದಿಂದ ಹೊರಡುವುದು ಭಾರತದ ಭದ್ರತೆಗೆ ಬಾಧಕವಾಗಬಹುದು ಅಥವಾ ಬಾಧಕವಾಗುವ ಸಂಭವ ಇದೆ ಎಂಬ;

(ಡಿ) ಅರ್ಜಿದಾರನು ಭಾರತದ ಹೊರಗೆ ಇರುವುದು ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಮೇಲೆ ಪ್ರತಿಕೂಲ ಪರಿಣಾಮವುಂಟು ಮಾಡಬಹುದು ಅಥವಾ ಉಂಟುಮಾಡುವ ಸಂಭವ ಇದೆ ಎಂಬ;

(ಇ) ಅರ್ಜಿದಾರನು, ತನ್ನ ಅರ್ಜಿಯ ದಿನಾಂಕದ ನಿಕಟಪೂರ್ವದ ಐದು ವರ್ಷಗಳ ಅವಧಿಯ ಯಾವುದೇ ಸಮಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕೆ ಭಾರತದ ಒಂದು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದನೆಂಬ ಮತ್ತು ಅದರ ಸಂಬಂಧದಲ್ಲಿ ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಕಾರಾವಾಸದ ಶಿಕ್ಷೆಗೆ ಒಳಗಾಗಿದ್ದನೆಂಬ;

(ಎಫ್) ಅರ್ಜಿದಾರನು ಮಾಡಿರುವನೆಂದು ಆಪಾದಿಸಲಾದ ಅಪರಾಧಕ್ಕೆ ಸಂಬಂಧಿಸಿದ ವ್ಯವಹರಣೆಗಳು ಭಾರತದಲ್ಲಿನ ಒಂದು ಕ್ರಿಮಿನಲ್ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿ ಇದೆ ಎಂಬ;

(ಜಿ) ಅರ್ಜಿದಾರನ ಹಾಜರಾತಿಗೆ ವಾರಂಟನ್ನು ಅಥವಾ ಸಮನುಗಳನ್ನು ಅಥವಾ ಬಂಧನಕ್ಕೆ ವಾರಂಟನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಲಯವು ಹೊರಡಿಸಿದೆ ಎಂಬ ಅಥವಾ ಅರ್ಜಿದಾರನು ಭಾರತದಿಂದ ಹೊರಡುವುದನ್ನು ನಿಷೇಧಿಸುವ ಆದೇಶವನ್ನು ಯಾವುದೇ ಅಂತಹ ನ್ಯಾಯಾಲಯವು ಮಾಡಿದೆ ಎಂಬ;

(ಹೆಚ್) ಅರ್ಜಿದಾರನನ್ನು ಮರಳಿ ಕಳುಹಿಸಲಾಗಿದೆ ಎಂಬ ಮತ್ತು ಹಾಗೆ ಮರಳಿ ಕಳುಹಿಸಿರುವುದಕ್ಕೆ ಸಂಬಂಧಿಸಿದಂತೆ ವಹಿಸಿದ ವೆಚ್ಚವನ್ನು ತುಂಬಿಕೊಟ್ಟಿಲ್ಲ ಎಂಬ;

(ಐ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅರ್ಜಿದಾರನಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ ಎಂಬ

– ಕಾರಣ ಅಥವಾ ಕಾರಣಗಳ ಮೇಲೆ ನಿರಾಕರಿಸತಕ್ಕದ್ದೇ ಹೊರತು, ಯಾವುದೇ ಇತರ ಕಾರಣಗಳ ಮೇಲೆ ಅಲ್ಲ.

7. **ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಅವಧಿ.–** ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು ಮೊದಲೇ ರದ್ದುಗೊಂಡಿದ್ದ ಹೊರತು, ನಿಯಮಿಸಬಹುದಾದಂತಹ ಅವಧಿಯವರೆಗೂ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ವರ್ಗಗಳಿಗೆ ಅಥವಾ ಅಂತಹ ಪ್ರತಿಯೊಂದು ವರ್ಗದಲ್ಲಿನ ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ಪ್ರವರ್ಗಗಳಿಗೆ ಬೇರೆಬೇರೆ ಅವಧಿಗಳನ್ನು ನಿಯಮಿಸಬಹುದು:

ಪರಂತು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು,–

(ಎ) ಯಾವ ವ್ಯಕ್ತಿಗೆ ಅದು ಅವಶ್ಯಕವಾಗಿದೆಯೋ ಆ ವ್ಯಕ್ತಿಯು ಕಡಿಮೆ ಅವಧಿಗೆ ನೀಡಬೇಕೆಂದು ಅಪೇಕ್ಷಿಸಿದ್ದರೆ; ಅಥವಾ

(ಬಿ) ಪಾಸ್‌ಪೋರ್ಟ್ ಪ್ರಾಧಿಕಾರವು ಅರ್ಜಿದಾರನಿಗೆ ಲಿಖಿತದಲ್ಲಿ ತಿಳಿಸಬೇಕಾದ ಕಾರಣಗಳಿಗಾಗಿ, ಯಾವುದೇ ಪ್ರಕರಣದಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಕಡಿಮೆ ಅವಧಿಗೆ ನೀಡತಕ್ಕದ್ದೆಂದು ಪರಿಗಣಿಸಿದರೆ

- ನಿಯಮಿಸಿದ ಅವಧಿಗಿಂತ ಕಡಿಮೆ ಅವಧಿಗೆ ನೀಡಬಹುದು.

8. **ಪಾಸ್‌ಪೋರ್ಟ್ ಅವಧಿಯ ವಿಸ್ತರಣೆ.–** 7ನೇ ಪ್ರಕರಣದ ಮೇರೆಗೆ ನಿಯಮಿಸಲಾದ ಅವಧಿಗಿಂತ ಕಡಿಮೆ ಅವಧಿಗೆ ಪಾಸ್‌ಪೋರ್ಟನ್ನು ನೀಡಿರುವಲ್ಲಿ, ಅಂತಹ ಕಡಿಮೆ ಅವಧಿಯನ್ನು ಪಾಸ್‌ಪೋರ್ಟ್ ಪ್ರಾಧಿಕಾರವು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅನ್ಯಥಾ ನಿರ್ಧರಿಸಿದ ಹೊರತು, ಮತ್ತಷ್ಟು ಅವಧಿಗೆ ವಿಸ್ತರಿಸತಕ್ಕದ್ದು (ಇದು ಕಡಿಮೆ ಅವಧಿಯೂ ಸೇರಿದಂತೆ ನಿಯಮಿಸಿದ ಅವಧಿಯನ್ನು ಮೀರತಕ್ಕದ್ದಲ್ಲ) ಮತ್ತು ಈ ಅಧಿನಿಯಮದ ಉಪಬಂಧಗಳು ಪಾಸ್‌ಪೋರ್ಟ್‌ನ ನೀಡಿಕೆಗೆ ಅವು ಅನ್ವಯವಾಗುವಂತೆಯೇ ಅಂತಹ ವಿಸ್ತರಣೆಗೂ ಅನ್ವಯವಾಗತಕ್ಕದ್ದು.

9. **ಪಾಸ್‌ಪೋರ್ಟ್‌ಗಳ ಮತ್ತು ಪ್ರಯಾಣದ ದಸ್ತಾವೇಜುಗಳ ಷರತ್ತುಗಳು ಮತ್ತು ನಮೂನೆಗಳು.–** ಯಾವ ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ನಮೂನೆಯಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡತಕ್ಕದ್ದೋ ಅಥವಾ ನವೀಕರಿಸತಕ್ಕದ್ದೋ ಆ ಷರತ್ತುಗಳು ಮತ್ತು ನಮೂನೆಯು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ವರ್ಗಗಳಿಗೆ ಅಥವಾ ಅಂತಹ ಪ್ರತಿಯೊಂದು ವರ್ಗದಲ್ಲಿನ ಪಾಸ್‌ಪೋರ್ಟ್‌ಗಳ ಅಥವಾ ಪ್ರಯಾಣದ ದಸ್ತಾವೇಜುಗಳ ಬೇರೆಬೇರೆ ಪ್ರವರ್ಗಗಳಿಗೆ ಬೇರೆಬೇರೆ ಷರತ್ತುಗಳನ್ನು ಮತ್ತು ಬೇರೆಬೇರೆ ನಮೂನೆಗಳನ್ನು ನಿಯಮಿಸಬಹುದು:

ಮತ್ತೂ ಪರಂತು, ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು, ನಿಯಮಿಸಲಾದ ಷರತ್ತುಗಳ ಜೊತೆಗೆ, ಪಾಸ್‌ಪೋರ್ಟ್ ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ವಿಧಿಸಬಹುದಾದಂತಹ ಇತರ ಷರತ್ತುಗಳನ್ನು ಒಳಗೊಂಡಿರತಕ್ಕದ್ದು.

10. **ಪಾಸ್‌ಪೋರ್ಟ್‌ಗಳನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ವ್ಯತ್ಯಸ್ಥಗೊಳಿಸುವುದು, ವಶಪಡಿಸಿಕೊಳ್ಳುವುದು ಮತ್ತು ರದ್ದುಪಡಿಸುವುದು.–** (1) ಪಾಸ್‌ಪೋರ್ಟ್ ಪ್ರಾಧಿಕಾರವು, 6ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಅಥವಾ 19ನೇ ಪ್ರಕರಣದ ಮೇರೆಗಿನ ಯಾವುದೇ

ಅಧಿಸೂಚನೆಯನ್ನು ಗಮನದಲ್ಲಿಟ್ಟುಕೊಂಡು ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲಿನ ಹಿಂಬರಹಗಳನ್ನು ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಪಡಿಸಬಹುದು ಅಥವಾ ಯಾವ ಷರತ್ತುಗಳಿಗೊಳಪಟ್ಟು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡಲಾಗಿದೆಯೋ ಆ ಷರತ್ತುಗಳನ್ನು (ನಿಯಮಿಸಲಾದ ಷರತ್ತುಗಳನ್ನು ಹೊರತುಪಡಿಸಿ) ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಪಡಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಲಿಖಿತ ನೋಟೀಸಿನ ಮೂಲಕ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಸಮಯದೊಳಗೆ ತನಗೆ ಪಾಸ್‌ಪೋರ್ಟನ್ನು .ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸುವಂತೆ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನನ್ನು ಅಗತ್ಯಪಡಿಸಬಹುದು ಮತ್ತು ಧಾರಕನು ಅಂತಹ ನೋಟೀಸನ್ನು ಪಾಲಿಸತಕ್ಕದ್ದು.

(2) ಪಾಸ್‌ಪೋರ್ಟ್ ಪ್ರಾಧಿಕಾರವು, ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳನ್ನು (ನಿಯಮಿಸಿದ ಷರತ್ತುಗಳನ್ನು ಹೊರತುಪಡಿಸಿ) ಸಹ ವ್ಯತ್ಯಸ್ಥಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

(3) ಪಾಸ್‌ಪೋರ್ಟ್ ಪ್ರಾಧಿಕಾರವು, –

(ಎ) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಅದನ್ನು ಅಕ್ರಮವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಮನವರಿಕೆಯಾದರೆ;

(ಬಿ) ಮುಖ್ಯ ಮಾಹಿತಿಯನ್ನು ಮರೆಮಾಚಿ ಅಥವಾ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಅಥವಾ ಅವನ ಪರವಾಗಿ ಯಾರೇ ಇತರ ವ್ಯಕ್ತಿಯು ಒದಗಿಸಿದ ತಪ್ಪು ಮಾಹಿತಿಯ ಆಧಾರದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಪಡೆದುಕೊಂಡಿದ್ದರೆ:

ಪರಂತು, ಅಂತಹ ಪಾಸ್‌ಪೋರ್ಟ್ ಧಾರಕನು ಮತ್ತೊಂದು ಪಾಸ್‌ಪೊರ್ಟನ್ನು ಪಡೆದಿದ್ದರೆ, ಪಾಸ್‌ಪೋರ್ಟ್ ಪ್ರಾಧಿಕಾರವು, ಅಂತಹ ಇತರ ಪಾಸ್‌ಪೋರ್ಟನ್ನು ಸಹ

ವಶಪಡಿಸಿಕೊಳ್ಳತಕ್ಕದ್ದು ಅಥವಾ ವಶಪಡಿಸಿಕೊಳ್ಳುವಂತೆ ಮಾಡತಕ್ಕದ್ದು ಅಥವಾ ರದ್ದುಪಡಿಸತಕ್ಕದ್ದು.

(ಸಿ) ಪಾಸ್‌ಪೋರ್ಟ್ ಪ್ರಾಧಿಕಾರವು ಭಾರತದ ಸಾರ್ವಭೌಮತೆಯ ಮತ್ತು ಅಖಂಡತೆಯ, ಭಾರತದ ಭದ್ರತೆಯ, ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಭಾವಿಸಿದರೆ;

(ಡಿ) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡಿದ ನಂತರ ಯಾವುದೇ ಕಾಲದಲ್ಲಿ ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕಾಗಿ ಭಾರತದ ಒಂದು ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಅದರ ಸಂಬಂಧದಲ್ಲಿ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ;

(ಇ) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಮಾಡಿರುವನೆಂದು ಆಪಾದಿಸಲಾದ ಅಪರಾಧಕ್ಕೆ ಸಂಬಂಧಿಸಿದ ವ್ಯವಹರಣೆಗಳು ಭಾರತದಲ್ಲಿನ ಒಂದು ಕ್ರಿಮಿನಲ್ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದ್ದರೆ;

(ಎಫ್) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದರೆ;

(ಜಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸುವಂತೆ ಅಗತ್ಯಪಡಿಸುವ, (1)ನೇ ಉಪಪ್ರಕರಣದ ಮೇರೆಗಿನ ನೋಟೀಸನ್ನು ಪಾಲಿಸಲು ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ವಿಫಲನಾದರೆ;

(ಹೆಚ್) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನ ಹಾಜರಾತಿಗೆ ವಾರಂಟನ್ನು ಅಥವಾ ಸಮನುಗಳನ್ನು ಅಥವಾ ಬಂಧನಕ್ಕೆ ವಾರಂಟನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನ್ಯಾಯಾಲಯವು ಹೊರಡಿಸಿರುವುದನ್ನು ಪಾಸ್‌ಪೋರ್ಟ್ ಪ್ರಾಧಿಕಾರದ ಗಮನಕ್ಕೆ ತಂದಿದ್ದರೆ ಅಥವಾ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಭಾರತದಿಂದ ಹೊರಡುವುದನ್ನು ನಿಷೇಧಿಸುವ ಆದೇಶವನ್ನು, ಯಾವುದೇ ಅಂತಹ ನ್ಯಾಯಾಲಯವು ಮಾಡಿದ್ದರೆ ಮತ್ತು ವಾರಂಟನ್ನು ಅಥವಾ

ಸಮನುಗಳನ್ನು ಹಾಗೆ ಹೊರಡಿಸಲಾಗಿದೆ ಅಥವಾ ಆದೇಶವನ್ನು ಹಾಗೆ ಮಾಡಲಾಗಿದೆ ಎಂದು ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಮನವರಿಕೆಯಾದರೆ

– ಅಂತಹ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು ಅಥವಾ ವಶಪಡಿಸಿಕೊಳ್ಳುವಂತೆ ಮಾಡಬಹುದು ಅಥವಾ ರದ್ದುಪಡಿಸಬಹುದು.

(4) ಪಾಸ್‌ಪೋರ್ಟ್ ಪ್ರಾಧಿಕಾರವು, ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು, ಅದರ ಧಾರಕನು ಸಲ್ಲಿಸಿದ ಅರ್ಜಿಯ ಮೇಲೆ ಸಹ ರದ್ದುಪಡಿಸಬಹುದು.

(5) ಪಾಸ್‌ಪೋರ್ಟ್ ಪ್ರಾಧಿಕಾರವು, (1)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲಿನ ಹಿಂಬರಹಗಳನ್ನು ವ್ಯತ್ಯಸ್ಥಗೊಳಿಸುವ ಅಥವಾ ರದ್ದುಪಡಿಸುವ ಅಥವಾ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಷರತ್ತುಗಳನ್ನು ವ್ಯತ್ಯಸ್ಥಗೊಳಿಸುವ ಆದೇಶವನ್ನು ಅಥವಾ (3)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವ ಅಥವಾ ರದ್ದುಪಡಿಸುವ ಆದೇಶವನ್ನು ಮಾಡಿದಲ್ಲಿ, ಅದು, ಅಂತಹ ಆದೇಶವನ್ನು ಮಾಡಿದ್ದಕ್ಕೆ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ಯಾವುದೇ ಪ್ರಕರಣದಲ್ಲಿ ಅದರ ಪ್ರತಿಯನ್ನು ಒದಗಿಸುವುದರಿಂದ ಭಾರತದ ಸಾರ್ವಭೌಮತೆಗೆ ಮತ್ತು ಅಖಂಡತೆಗೆ, ಭಾರತದ ಭದ್ರತೆಗೆ, ಯಾವುದೇ ವಿದೇಶದೊಂದಿಗಿನ ಭಾರತದ ಸ್ನೇಹ ಸಂಬಂಧಗಳಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗಳಿಗೆ ಬಾಧಕವುಂಟಾಗುವುದೆಂದು ಪಾಸ್‌ಪೋರ್ಟ್ ಪ್ರಾಧಿಕಾರವು ಅಭಿಪ್ರಾಯಪಟ್ಟ ಹೊರತು, ಆ ಆದೇಶದ ಪ್ರತಿಯನ್ನು ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಕೇಳಿದಾಗ ಅವನಿಗೆ ಒದಗಿಸತಕ್ಕದ್ದು.

(6) ಪಾಸ್‌ಪೋರ್ಟ್ ಪ್ರಾಧಿಕಾರವು ಯಾವ ಪ್ರಾಧಿಕಾರಕ್ಕೆ ಅಧೀನವಾಗಿದೆಯೋ ಆ ಪ್ರಾಧಿಕಾರವು, ಲಿಖಿತ ಆದೇಶದ ಮೂಲಕ, ಪಾಸ್‌ಪೋರ್ಟ್ ಪ್ರಾಧಿಕಾರವು ಯಾವ ಕಾರಣದ ಮೇಲೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದೋ ಅಥವಾ ರದ್ದುಪಡಿಸಬಹುದೋ ಆ ಯಾವುದೇ ಕಾರಣದ ಮೇಲೆ ಅದನ್ನು ವಶಪಡಿಸಿಕೊಳ್ಳಬಹುದು ಅಥವಾ ವಶಪಡಿಸಿಕೊಳ್ಳುವಂತೆ ಮಾಡಬಹುದು ಅಥವಾ ರದ್ದುಪಡಿಸಬಹುದು ಮತ್ತು ಈ ಪ್ರಕರಣದ ಮೇಲೆ ಹೇಳಿದ ಉಪಬಂಧಗಳು, ಅಂತಹ ಪ್ರಾಧಿಕಾರವು ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವುದಕ್ಕೆ ಅಥವಾ ರದ್ದುಪಡಿಸುವುದಕ್ಕೆ ಸಂಬಂಧಿಸಿದಂತೆ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

(7) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನ್ಯಾಯಾಲಯವು, ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನನ್ನು ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣಯಿಸಿದಾಗಲೂ ಸಹ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ರದ್ದುಪಡಿಸಬಹುದು:

ಪರಂತು, ಅಪರಾಧ ನಿರ್ಣಯವನ್ನು ಅಪೀಲಿನ ಮೇಲೆ ಅಥವಾ ಅನ್ಯಥಾ ತಳ್ಳಿಹಾಕಿದರೆ ರದ್ದಿಯಾತಿಯು ಅನೂರ್ಜಿತವಾಗತಕ್ಕದ್ದು.

(8) 7ನೇ ಉಪಪ್ರಕರಣದ ಮೇರೆಗಿನ ರದ್ದಿಯಾತಿಯ ಆದೇಶವನ್ನು, ಅಪೀಲು ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ತನ್ನ ಪುನರೀಕ್ಷಣಾ ಅಧಿಕಾರಗಳನ್ನು ಚಲಾಯಿಸುವಾಗಲೂ ಸಹ ಮಾಡಬಹುದು.

(9) ಈ ಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ರದ್ದುಪಡಿಸಿದ ಮೇಲೆ, ಅದರ ಧಾರಕನು, ಅದನ್ನು ಈಗಾಗಲೇ ವಶಪಡಿಸಿಕೊಂಡಿರದಿದ್ದರೆ, ಯಾವ ಪ್ರಾಧಿಕಾರಿಯು ಅದನ್ನು ರದ್ದುಪಡಿಸಿರುವನೋ ಆ ಪ್ರಾಧಿಕಾರಿಗೆ ಅಥವಾ ರದ್ದಿಯಾತಿಯ ಆದೇಶದಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ಇತರ ಪ್ರಾಧಿಕಾರಿಗೆ ವಿಳಂಬ ಮಾಡದೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಒಪ್ಪಿಸತಕ್ಕದ್ದು.

**10ಎ. ಕೆಲವು ಸಂದರ್ಭಗಳಲ್ಲಿ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜುಗಳನ್ನು ಅಮಾನತ್ತುಗೊಳಿಸುವುದು.**– (1) 10ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, 10ನೇ ಪ್ರಕರಣದ (3)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳುವ ಅಥವಾ ವಶಪಡಿಸಿಕೊಳ್ಳುವಂತೆ ಮಾಡುವ ಅಥವಾ ರದ್ದುಪಡಿಸುವ ಸಂಭವವಿದೆಯೆಂದು ಮತ್ತು ಹಾಗೇ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಅಥವಾ ಯಾರೇ ಹೆಸರಿಸಿದ ಅಧಿಕಾರಿಗೆ ಮನದಟ್ಟಾದರೆ, ಅದು ಅಥವಾ ಅವನು ನಾಲ್ಕು ವಾರಗಳನ್ನು ಮೀರದಂತಹ ಅವಧಿಗೆ, –

(ಎ) ಆದೇಶದ ಮೂಲಕ, ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಕೂಡಲೇ ಜಾರಿಗೆ ಬರುವಂತೆ ಅಮಾನತುಗೊಳಿಸಬಹುದು;

(ಬಿ) ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಅಸಿಂಧುಗೊಳಿಸುವ ಪರಿಣಾಮವುಳ್ಳ ಇತರ ಸಮುಚಿತ ಆದೇಶವನ್ನು ಹೊರಡಿಸಬಹುದು:

ಪರಂತು, ಕೇಂದ್ರ ಸರ್ಕಾರವು ಅಥವಾ ಹೆಸರಿಸಿದ ಅಧಿಕಾರಿಯು, ತಾನು ಸೂಕ್ತವೆಂದು ಪರಿಗಣಿಸಿದರೆ, 10ನೇ ಪ್ರಕರಣದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವ್ಯತ್ಯಸ್ಥಗೊಳಿಸುವುದಕ್ಕೆ, ವಶಪಡಿಸಿಕೊಳ್ಳುವುದಕ್ಕೆ ಅಥವಾ ರದ್ದುಪಡಿಸುವುದಕ್ಕೆ ಸಂಬಂಧಿಸಿದ ವ್ಯವಹರಣೆಗಳು ಮುಕ್ತಾಯಗೊಳ್ಳುವವರೆಗೆ ಸದರಿ ನಾಲ್ಕು ವಾರಗಳ ಅವಧಿಯನ್ನು, ಆದೇಶದ ಮೂಲಕ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ವಿಸ್ತರಿಸಬಹುದು:

ಮತ್ತೂ ಪರಂತು, ಯಾವ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನಿಗೆ ಸಂಬಂಧಿಸಿದಂತೆ ಈ ಉಪಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆಯೋ ಆ ಪ್ರತಿಯೊಬ್ಬ ಧಾರಕನಿಗೆ, ಅಂತಹ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಲೆಕ್ಕ ಹಾಕಿದ ಎಂಟು ವಾರಗಳಿಗೆ ಮೀರದಂತಹ ಅವಧಿಯೊಳಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು ಮತ್ತು ಆ ತರುವಾಯ ಕೇಂದ್ರ ಸರ್ಕಾರವು, ಅವಶ್ಯವಿದ್ದರೆ, ಲಿಖಿತ ಆದೇಶದ ಮೂಲಕ, ಈ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಮಾರ್ಪಾಟು ಮಾಡಬಹುದು ಅಥವಾ ರದ್ದುಪಡಿಸಬಹುದು.

(2) ಹೆಸರಿಸಿದ ಅಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಜಾರಿಗೊಳಿಸಿದ ಆದೇಶಗಳನ್ನು ವಿಮಾನ ನಿಲ್ದಾಣದಲ್ಲಿರುವ ಅಥವಾ ನೌಕಾರೋಹಣದ ಅಥವಾ ವಲಸೆಯ ಯಾವುದೇ ಇತರ ಸ್ಥಳದಲ್ಲಿರುವ ಸಂಬಂಧಪಟ್ಟ ಪ್ರಾಧಿಕಾರಿಗೆ, ಮತ್ತು ಪಾಸ್‌ಪೋರ್ಟ್ ಪ್ರಾಧಿಕಾರಿಗೆ, ಕೂಡಲೇ ಕಳುಹಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಪ್ರಾಧಿಕಾರಿಯು, (1)ನೇ ಉಪಪ್ರಕರಣದ ಮೇರೆಗೆ ಜಾರಿಗೊಳಿಸಿದ ಆದೇಶವನ್ನು ಸ್ವೀಕರಿಸಿದ ಕೂಡಲೇ ಅಂತಹ ಆದೇಶವನ್ನು ಜಾರಿಗೆ ತರತಕ್ಕದ್ದು.

**10ಬಿ. ಸೂಚನೆಗಳ ಮಾನ್ಯೀಕರಣ.–** 10ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾರೇ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಧಾರಕನು ಭಾರತದಿಂದ ಹೊರಡುವುದನ್ನು ನಿರ್ಬಂಧಿಸಿ ಅಥವಾ ಯಾವುದೇ ರೀತಿಯಲ್ಲಿ ಪ್ರತಿಬಂಧಿಸಿ, ಕೇಂದ್ರ ಸರ್ಕಾರವು ಅಥವಾ ಹೆಸರಿಸಿದ ಅಧಿಕಾರಿಯು ಪಾಸ್‌ಪೋರ್ಟ್‌ಗಳ (ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭಕ್ಕೆ ಮುಂಚೆ, ವಿಮಾನ ನಿಲ್ದಾಣದಲ್ಲಿರುವ ಅಥವಾ ನೌಕಾರೋಹಣದ ಅಥವಾ ವಲಸೆಯ ಯಾವುದೇ ಇತರ ಸ್ಥಳದಲ್ಲಿರುವ ಯಾರೇ ವಲಸೆ ಪ್ರಾಧಿಕಾರಿಗೆ ನೀಡಿದ ಪ್ರತಿಯೊಂದು ಸೂಚನೆಯನ್ನು 10ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಆದೇಶವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂತಹ ಆದೇಶವು ಪಾಸ್‌ಪೋರ್ಟ್ (ತಿದ್ದುಪಡಿ) ಅಧಿನಿಯಮ, 2002ರ ಪ್ರಾರಂಭದ ದಿನಾಂಕದಿಂದ ಮೂರು ತಿಂಗಳುಗಳ ಅವಧಿ ಅಥವಾ ಅಂತಹ ಸೂಚನೆಯನ್ನು ನೀಡಿದ ದಿನಾಂಕ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ವಿವರಣೆ.–** 10ಎ ಮತ್ತು 10ಬಿ ಪ್ರಕರಣಗಳ ಉದ್ದೇಶಗಳಿಗಾಗಿ, "ಹೆಸರಿಸಿದ ಅಧಿಕಾರಿ" ಎಂದರೆ, ಲಿಖಿತ ಆದೇಶದ ಮೂಲಕ, ಕೇಂದ್ರ ಸರ್ಕಾರವು ಹಾಗೆಂದು ಹೆಸರಿಸಿದಂತಹ ಅಧಿಕಾರಿ ಅಥವಾ ಪ್ರಾಧಿಕಾರಿ.

11. **ಅಪೀಲುಗಳು.–** (1) 5ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಅಥವಾ 7ನೇ ಪ್ರಕರಣದ ಪರಂತುಕದ (ಬಿ) ಖಂಡದ ಅಥವಾ 10ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (3)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟ್ ಪ್ರಾಧಿಕಾರವು ಹೊರಡಿಸಿದ ಆದೇಶದಿಂದ ಅಥವಾ ಪಾಸ್‌ಪೋರ್ಟ್ ಪ್ರಾಧಿಕಾರಿಯು ಯಾವ ಪ್ರಾಧಿಕಾರಿಗೆ ಅಧೀನನಾಗಿರುವನೋ ಆ ಪ್ರಾಧಿಕಾರಿಯು 10ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ಆದೇಶದ ವಿರುದ್ಧ ಅಂತಹ ಪ್ರಾಧಿಕಾರಿಗೆ (ಇದರಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಮತ್ತು ನಿಯಮಿಸಬಹುದಾದಂತಹ ಅವಧಿಯೊಳಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಕೇಂದ್ರ ಸರ್ಕಾರವು ಮಾಡಿದ ಯಾವುದೇ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

(2) ಅಪೀಲನ್ನು, ಹೂಡಲು ನಿಯಮಿಸಲಾದ ಅವಧಿಯು ಮುಕ್ತಾಯದ ನಂತರ ಅಪೀಲನ್ನು ಹೂಡಲಾಗಿದ್ದರೆ ಅದನ್ನು ಅಂಗೀಕರಿಸತಕ್ಕದ್ದಲ್ಲ:

ಪರಂತು, ಅಪೀಲನ್ನು ಆ ಅವಧಿಯೊಳಗೆ ಹೂಡದಿರಲು ತನಗೆ ಸಾಕಷ್ಟು ಕಾರಣ ಇತ್ತೆಂದು ಅಪೀಲುದಾರನು ಅಪೀಲು ಪ್ರಾಧಿಕಾರಿಗೆ ಮನವರಿಕೆ ಮಾಡಿಕೊಟ್ಟರೆ, ಅಪೀಲನ್ನು ಹೂಡಲು ನಿಯಮಿಸಲಾದ ಅಂಥ ಅವಧಿಯು ಮುಕ್ತಾಯದ ನಂತರವೂ ಅಪೀಲನ್ನು ಅಂಗೀಕರಿಸಬಹುದು.

(3) ಕಾಲಪರಿಮಿತಿ ಅಧಿನಿಯಮ, 1963 (1963ರ 36)ರ ಮೇರೆಗೆ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕಹಾಕುವುದಕ್ಕೆ ಸಂಬಂಧಿಸಿದಂತೆಯೇ ಅಪೀಲಿಗಾಗಿ ನಿಯಮಿಸಲಾದ ಅವಧಿಯನ್ನು ಆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಲೆಕ್ಕಹಾಕತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಪ್ರತಿಯೊಂದು ಅಪೀಲನ್ನು ಲಿಖಿತ ಅರ್ಜಿಯ ಮೂಲಕ ಸಲ್ಲಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧ ಅಪೀಲು ಹೂಡಲಾಗಿದೆಯೋ ಆ ಆದೇಶದ ಕಾರಣಗಳ ವಿವರಣೆಯ ಪ್ರತಿಯನ್ನು ಅಪೀಲುದಾರನಿಗೆ ಒದಗಿಸಿರುವಲ್ಲಿ ಆ ಪ್ರತಿಯು ಹಾಗೂ ಸುಸಂಬದ್ಧ ದಾಖಲೆಗಳನ್ನು ತರಿಸಿಕೊಳ್ಳುವುದಕ್ಕಾಗಿ ಮತ್ತು ಸಂಬಂಧಿಸಿದ ಸೇವೆಗಳಿಗಾಗಿ ತಗಲಬಹುದಾದ ವೆಚ್ಚಗಳನ್ನು ಭರಿಸುವುದಕ್ಕಾಗಿ ನಿಯಮಿಸಬಹುದಾದಂತಹ ಫೀಜು ಅದರ ಜೊತೆಗೆ ಇರತಕ್ಕದ್ದು.

(5) ಅಪೀಲನ್ನು ವಿಲೆ ಮಾಡುವಾಗ, ಅಪೀಲು ಪ್ರಾಧಿಕಾರಿಯು ನಿಯಮಿಸಬಹುದಾದಂತಹ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

ಪರಂತು, ಅಪೀಲುದಾರನಿಗೆ ತನ್ನ ವಾದವನ್ನು ಮಂಡಿಸಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಪೀಲನ್ನು ವಿಲೆ ಮಾಡತಕ್ಕದ್ದಲ್ಲ.

(6) ಯಾವ ಆದೇಶದ ವಿರುದ್ದ ಅಪೀಲು ಹೂಡಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸಿ, ಮಾರ್ಪಾಟುಗೊಳಿಸಿ ಅಥವಾ ವಿಪರ್ಯಯಗೊಳಿಸಿ, ಅಪೀಲು ಪ್ರಾಧಿಕಾರಿಯು ಮಾಡಿದ ಪ್ರತಿಯೊಂದು ಆದೇಶವು ಅಂತಿಮವಾದುದಾಗಿರತಕ್ಕದ್ದು.

**12. ಅಪರಾಧಗಳು ಮತ್ತು ದಂಡನೆಗಳು.–** (1) ಯಾರೇ ವ್ಯಕ್ತಿಯು,–

(ಎ) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಪಡೆಯುವ ದೃಷ್ಟಿಯಿಂದ ಗೊತ್ತಿದ್ದೂ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿದರೆ ಅಥವಾ ಯಾವುದೇ ಮುಖ್ಯ ಮಾಹಿತಿಯನ್ನು ಮರೆಮಾಚಿದ್ದರೆ ಅಥವಾ

ಪಾಸ್‌ಪೋರ್ಟ್‌ನಲ್ಲಿ ಅಥವಾ ಪ್ರಯಾಣದ ದಸ್ತಾವೇಜಿನಲ್ಲಿ ಮಾಡಿದ ನಮೂದನೆಗಳನ್ನು ಕಾನೂನುಸಮ್ಮತ ಅಧಿಕಾರವಿಲ್ಲದೆ ವ್ಯತ್ಯಾಸಗೊಳಿಸಿದರೆ ಅಥವಾ ವ್ಯತ್ಯಾಸಗೊಳಿಸಲು ಪ್ರಯತ್ನಿದರೆ ಅಥವಾ ವ್ಯತ್ಯಾಸಗೊಳಿಸುವಂತೆ ಮಾಡಿದರೆ; ಅಥವಾ

(ಸಿ) ಅವನ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು (ಈ ಅಧಿನಿಯಮದ ಮೇರೆಗೆ ನೀಡಿರಲಿ ಅಥವಾ ನೀಡಿಲ್ಲದಿರಲಿ) ಪರಿಶೀಲನೆಗಾಗಿ ಹಾಜರುಪಡಿಸುವಂತೆ ನಿಯಮಿಸಿದ ಪ್ರಾಧಿಕಾರಿಯು ಕೇಳಿದಾಗ ಅದನ್ನು ಹಾಜರುಪಡಿಸಲು ವಿಫಲನಾದರೆ; ಅಥವಾ

(ಡಿ) ಮತ್ತೊಬ್ಬ ವ್ಯಕ್ತಿಗೆ ನೀಡಿದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಗೊತ್ತಿದ್ದೂ ಬಳಸಿದರೆ; ಅಥವಾ

(ಇ) ತನಗೆ ನೀಡಿದ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ಬಳಸಲು ಗೊತ್ತಿದ್ದು ಮತ್ತೊಬ್ಬ ವ್ಯಕ್ತಿಗೆ ಅನುಮತಿಸಿದರೆ

– ಅವನು ಎರಡು ವರ್ಷಗಳವರಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(1ಎ) ಭಾರತದ ನಾಗರಿಕನಲ್ಲದ ಯಾರೇ ವ್ಯಕ್ತಿಯು,–

(ಎ) ಪಾಸ್‌ಪೋರ್ಟ್‌ಗೆ ಅರ್ಜಿಯನ್ನು ಸಲ್ಲಿಸದರೆ ಅಥವಾ ತನ್ನ ರಾಷ್ಟ್ರೀಯತೆಯ ಬಗೆಗಿನ ಮಾಹಿತಿಯನ್ನು ಮರೆಮಾಚಿ ಪಾಸ್‌ಪೋರ್ಟನ್ನು ಪಡೆದರೆ; ಅಥವಾ

(ಬಿ) ಸೃಷ್ಟಿಸಿದ ಪಾಸ್‌ಪೋರ್ಟನ್ನು ಅಥವಾ ಯಾವುದೇ ಪ್ರಯಾಣದ ದಸ್ತಾವೇಜನ್ನು ಹೊಂದಿದ್ದರೆ

– ಅವನು ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಉಪಪ್ರಕರಣದ (1)ರ ಅಥವಾ ಉಪಪ್ರಕರಣ (1ಎ)ಯ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ ಮಾಡಲು ದುಷ್ಪ್ರೇರೇಪಿಸುವ ಯಾರೇ ವ್ಯಕ್ತಿಯು, ದುಷ್ಪ್ರೇರಣೆಯ ಪರಿಣಾಮವಾಗಿ ದುಷ್ಪ್ರೇರೇಪಿಸಿದ ಕೃತ್ಯವನ್ನು ಮಾಡಿದರೆ, ಆ ಅಪರಾಧಕ್ಕಾಗಿ ಆ ಉಪಪ್ರಕರಣದಲ್ಲಿ ಉಪಬಂಧಿಸಿದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(3) ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಯಾವುದೇ ಷರತ್ತನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಆ ಉಲ್ಲಂಘನೆಗಾಗಿ ಈ ಅಧಿನಿಯಮದಲ್ಲಿ ಬೇರೆಲ್ಲೂ ಯಾವುದೇ ಶಿಕ್ಷೆಯನ್ನು ಉಪಬಂಧಿಸಿಲ್ಲದಿದ್ದರೆ, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಯಾರೇ ವ್ಯಕ್ತಿಯು ಪುನಃ ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ, ಅವನು ನಂತರದ ಅಪರಾಧಕ್ಕಾಗಿ ಉಪಬಂಧಿಸಿದ ದಂಡನೆಯ ಎರಡುಪಟ್ಟು ದಂಡದಿಂದ ದಂಡಿತನಾಗತಕ್ಕದ್ದು.

13. **ಬಂಧಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಯಾರೇ ಸೀಮಾಸುಂಕ ಅಧಿಕಾರಿಯು ಮತ್ತು ಸಬ್‌ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಅಥವಾ ವಲಸೆ ಅಧಿಕಾರಿಯು, ಯಾರೇ ವ್ಯಕ್ತಿಯು 12ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದ್ದಾನೆಂಬ ಬಗ್ಗೆ ಸಕಾರಣಯುಕ್ತವಾಗಿ ಸಂಶಯಪಟ್ಟರೆ, ಆ ವ್ಯಕ್ತಿಯನ್ನು ವಾರಂಟಿಲ್ಲದೆ ಬಂಧಿಸಬಹುದು ಮತ್ತು, ಸಾಧ್ಯವಾದಷ್ಟು ಬೇಗನೆ, ಅಂತಹ ಬಂಧನಕ್ಕೆ ಕಾರಣಗಳನ್ನು ಅವನಿಗೆ ತಿಳಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಬಂಧಿಸುವ ಪ್ರತಿಯೊಬ್ಬ ಅಧಿಕಾರಿಯು ಅನಗತ್ಯ ವಿಳಂಬವಿಲ್ಲದೆ, ಬಂಧಿತ ವ್ಯಕ್ತಿಯನ್ನು, ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಬಳಿಗೆ ಕರೆದೊಯ್ಯತಕ್ಕದ್ದು ಅಥವಾ ಕಳುಹಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ,

1973 (1974ರ 2)ಯ 57ನೇ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಯಾವುದೇ ಅಂಥ ಬಂಧನಕ್ಕೆ ಅನ್ವಯವಾಗತಕ್ಕದ್ದು.

**14. ಶೋಧನೆ ಮಾಡಲು ಮತ್ತು ವಶಪಡಿಸಿಕೊಳ್ಳಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರಪಡೆದ ಯಾರೇ ಸೀಮಾ ಸುಂಕ ಅಧಿಕಾರಿಯು ಮತ್ತು ಸಬ್‌ಇನ್‌ಸ್ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಅಥವಾ ವಲಸೆ ಅಧಿಕಾರಿಯು ಯಾವುದೇ ಸ್ಥಳವನ್ನು ಶೋಧಿಸಬಹುದು ಮತ್ತು 12ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಯಾರೇ ವ್ಯಕ್ತಿಯ ಬಗ್ಗೆ ಸಕಾರಣಯುಕ್ತ ಗುಮಾನಿಯಿದ್ದಾಗ ಆ ವ್ಯಕ್ತಿಯಿಂದ ಯಾವುದೇ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು.

(2) ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಈ ಪ್ರಕರಣದ ಮೇರೆಗಿನ ಶೋಧನೆಗಳಿಗೆ ಮತ್ತು ವಶಪಡಿಸಿಕೊಳ್ಳುವುದಕ್ಕೆ, ಸಾಧ್ಯವಾಗಬಹುದಾದಷ್ಟುಮಟ್ಟಿಗೆ, ಅನ್ವಯವಾಗತಕ್ಕದ್ದು.

**15. ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಯು ಅಗತ್ಯ .–** ಕೇಂದ್ರ ಸರ್ಕಾರದ ಅಥವಾ ಈ ಬಗ್ಗೆ ಲಿಖಿತ ಆದೇಶದ ಮೂಲಕ ಆ ಸರ್ಕಾರವು ಅಧಿಕೃತಗೊಳಿಸಬಹುದಾದಂತಹ ಅಧಿಕಾರಿಯ ಅಥವಾ ಪ್ರಾಧಿಕಾರದ ಪೂರ್ವಮಂಜೂರಾತಿಯಿಲ್ಲದೆ ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**16. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಅಥವಾ ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**17. ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೇಂದ್ರ ಸರ್ಕಾರದ ಸ್ವತ್ತಾಗಿರುವುದು.–** ಈ ಅಧಿನಿಯಮದ ಮೇರೆಗೆ ನೀಡಿದ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು ಎಲ್ಲ ಕಾಲದಲ್ಲಿ ಕೇಂದ್ರ ಸರ್ಕಾರದ ಸ್ವತ್ತಾಗಿಯೇ ಇರತಕ್ಕದ್ದು.

**18. [ಬಿಟ್ಟು ಬಿಡಲಾಗಿದೆ]**

**19. ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಕೆಲವು ದೇಶಗಳಿಗೆ ಪ್ರಯಾಣಿಸುವುದಕ್ಕೆ ಅಮಾನ್ಯವಾಗಿರುವುದು.**– ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿದ ಮೇಲೆ ವಿದೇಶವು, –

(ಎ) ಭಾರತದ ವಿರುದ್ಧ ಬಾಹ್ಯ ಆಕ್ರಮಣವನ್ನು ಮಾಡುತ್ತಿರುವ ದೇಶವಾಗಿದ್ದರೆ; ಅಥವಾ

(ಬಿ) ಭಾರತದ ವಿರುದ್ಧ ಬಾಹ್ಯ ಆಕ್ರಮಣವನ್ನು ಮಾಡುತ್ತಿರುವ ದೇಶಕ್ಕೆ ನೆರವು ನೀಡುತ್ತಿರುವ ದೇಶವಾಗಿದ್ದರೆ; ಅಥವಾ

(ಸಿ) ಸಶಸ್ತ್ರ ಸಂಘರ್ಷವು ನಡೆಯುತ್ತಿರುವ ದೇಶವಾಗಿದ್ದರೆ; ಅಥವಾ

(ಡಿ) ಯಾವ ದೇಶಕ್ಕೆ ಪ್ರಯಾಣ ಮಾಡುವುದರಿಂದ ಭಾರತ ಸರ್ಕಾರದ ವಿದೇಶ ವ್ಯವಹಾರಗಳನ್ನು ನಡೆಸುವುದಕ್ಕೆ ತೀವ್ರ ಧಕ್ಕೆಯುಂಟಾಗುವುದೋ ಅಂತಹ ಪ್ರಯಾಣವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಬಂಧಿಸಬೇಕಾಗಿದೆಯೋ ಆ ದೇಶವಾಗಿದ್ದರೆ;

– ಅಂತಹ ದೇಶದ ಮೂಲಕ ಪ್ರಯಾಣಿಸುವುದಕ್ಕಾಗಿ ಅಥವಾ ಅಂತಹ ದೇಶಕ್ಕೆ ಭೇಟಿನೀಡುವುದಕ್ಕಾಗಿ ಕೊಟ್ಟ ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜು, ನಿಯಮಿಸಲಾದ ಪ್ರಾಧಿಕಾರವು ನಿಯಮಿಸಲಾದ ನಮೂನೆಯಲ್ಲಿ ಆ ಬಗ್ಗೆ ವಿಶೇಷ ಹಿಂಬರಹವನ್ನು ಮಾಡಿರುವ ಯಾವುದೇ ಪ್ರಕರಣದಲ್ಲಿ ಹೊರತುಪಡಿಸಿ, ಅಂತಹ ಪ್ರಯಾಣಕ್ಕೆ ಅಥವಾ ಭೇಟಿಗೆ ಮಾನ್ಯವಾಗಿರುವುದು ನಿಂತುಹೋಗತಕ್ಕದ್ದು.

**20. ಭಾರತದ ನಾಗರಿಕರಾಗಿಲ್ಲದ ವ್ಯಕ್ತಿಗಳಿಗೆ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ನೀಡುವುದು.**– ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಮೇಲೆ ಹೇಳಿದ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಭಾರತದ ನಾಗರಿಕನಾಗಿಲ್ಲದ ವ್ಯಕ್ತಿಗೆ ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಅಥವಾ ನೀಡುವಂತೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

**21. ವಹಿಸಿಕೊಡಲು ಅಧಿಕಾರ.**– ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, 6ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗಿನ ಅಧಿಕಾರವನ್ನು ಅಥವಾ

ಆ ಪ್ರಕರಣದ (2)ನೇ ಉಪಪ್ರಕರಣದ (ಐ) ಖಂಡದ ಮೇರೆಗಿನ ಅಧಿಕಾರವನ್ನು ಅಥವಾ 24ನೇ ಪ್ರಕರಣದ ಮೇರೆಗಿನ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಅಥವಾ ನೆರವೇರಿಸಬಹುದಾದ ಯಾವುದೇ ಪ್ರಕಾರ್ಯವನ್ನು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಅಂತಹ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ,-

(ಎ) ಕೇಂದ್ರ ಸರ್ಕಾರಕ್ಕೆ ಅಧೀನನಾಗಿರುವಂತಹ ಅಧಿಕಾರಿಯು ಅಥವಾ ಪ್ರಾಧಿಕಾರಿಯು; ಅಥವಾ

(ಬಿ) ಯಾವುದೇ ರಾಜ್ಯ ಸರ್ಕಾರವು ಅಥವಾ ಅಂತಹ ಸರ್ಕಾರಕ್ಕೆ ಅಧೀನನಾಗಿರುವ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರಿಯು; ಅಥವಾ

(ಸಿ) ಯಾವ ವಿದೇಶದಲ್ಲಿ ಭಾರತದ ರಾಜತಾಂತ್ರಿಕ ದೂತಾವಾಸವಿಲ್ಲವೊ ಆ ಯಾವುದೇ ದೇಶದಲ್ಲಿ, ಕಾನ್ಸುಲರ್ ಅಧಿಕಾರಿಯು

– ಚಲಾಯಿಸತಕ್ಕದು ಅಥವಾ ನೆರವೇರಿಸತಕ್ಕದು ಎಂದು ನಿರ್ದೇಶಿಸಬಹುದು.

22. **ವಿನಾಯಿತಿ ನೀಡಲು ಅಧಿಕಾರ.**– ಕೇಂದ್ರ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, –

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಎಲ್ಲ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ವಿನಾಯಿತಿ ನೀಡುವುದು; ಮತ್ತು

(ಬಿ) ಹಲವು ಸಂದರ್ಭಗಳಲ್ಲಿ, ಯಾವುದೇ ಅಂತಹ ಅಧಿಸೂಚನೆಯನ್ನು, ರದ್ದುಪಡಿಸುವುದು ಮತ್ತು ಅಂತಹುದೇ ಅಧಿಸೂಚನೆಯ ಮೂಲಕ, ವ್ಯಕ್ತಿಯನ್ನು ಅಥವಾ ವ್ಯಕ್ತಿಗಳ ವರ್ಗವನ್ನು ಅಂತಹ ಉಪಬಂಧಗಳ ಪ್ರವರ್ತನೆಗೆ ಪುನಃ ಒಳಪಡಿಸುವುದು

– ಅವಶ್ಯವೆಂದು ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ ಅದು ಹಾಗೆ ಮಾಡಬಹುದು.

**23. ಅಧಿನಿಯಮವು ಕೆಲವು ಅಧಿನಿಯಮಿತಿಗಳ ಜೊತೆಗೆ ಇರುವುದು.–** ಈ ಅಧಿನಿಯಮದ ಉಪಬಂಧಗಳು ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34), ವಲಸೆ ಅಧಿನಿಯಮ, 1983 (1983ರ 31), ವಿದೇಶಿಯರ ನೋಂದಣಿ ಅಧಿನಿಯಮ, 1939 (1939ರ 16), ವಿದೇಶಿಯರ ಅಧಿನಿಯಮ, 1946 (1946ರ 31), ಶತ್ರುಗಳೊಂದಿಗೆ ವ್ಯಾಪಾರ (ತುರ್ತು ಉಪಬಂಧಗಳ ಮುಂದುವರಿಕೆ) ಅಧಿನಿಯಮ, 1947 (1947ರ 16), ವಿದೇಶಿಯರ ಕಾನೂನು (ಅನ್ವಯ ಮತ್ತು ತಿದ್ದುಪಡಿ) ಅಧಿನಿಯಮ, 1962 (1962ರ 42), ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ, 1973 (1973ರ 46) ಇವುಗಳ ಮತ್ತು ವಿದೇಶಿಯರಿಗೆ ಮತ್ತು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ಇತರ ಅಧಿನಿಯಮಿತಿಗಳ ಉಪಬಂಧಗಳ ಜತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

**24. ನಿಯಮಗಳನ್ನು ರಚಿಸಲು ಅಧಿಕಾರ:–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) ಪಾಸ್‌ಪೋರ್ಟ್ ಪ್ರಾಧಿಕಾರಿಗಳ ನೇಮಕ, ಅಧಿಕಾರವ್ಯಾಪ್ತಿ, ನಿಯಂತ್ರಣ ಮತ್ತು ಪ್ರಕಾರ್ಯಗಳು;

(ಬಿ) ಅನುಕ್ರಮವಾಗಿ 4ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಮತ್ತು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪಾಸ್‌ಪೋರ್ಟನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ಯಾವ ವ್ಯಕ್ತಿಗಳಿಗೆ ನೀಡಬಹುದೋ ಆ ವ್ಯಕ್ತಿಗಳ ವರ್ಗಗಳು;

(ಸಿ) ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕಾಗಿ ಅಥವಾ ನವೀಕರಿಸುವುದಕ್ಕಾಗಿ ಅಥವಾ ಪಾಸ್‌ಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಹಿಂಬರಹ ಮಾಡುವುದಕ್ಕಾಗಿ ಸಲ್ಲಿಸಬೇಕಾದ ಅರ್ಜಿಯ ನಮೂನೆ ಮತ್ತು ವಿವರಗಳು

ಮತ್ತು ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸುವಲ್ಲಿ ಯಾವ ಅವಧಿಯೊಳಗೆ ಅದನ್ನು ಸಲ್ಲಿಸತಕ್ಕದ್ದೋ ಆ ಅವಧಿ;

(ಡಿ) ಪಾಸ್‌ಪೋರ್ಟ್‌ಗಳು ಮತ್ತು ಪ್ರಯಾಣದ ದಸ್ತಾವೇಜುಗಳು ಯಾವ ಅವಧಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೋ ಆ ಅವಧಿ;

(ಇ) ಬೇರೆಬೇರೆ ವರ್ಗಗಳ ಪಾಸ್‌ಪೋರ್ಟ್‌ಗಳನ್ನು ಮತ್ತು ಪ್ರಯಾಣದ ದಸ್ತಾವೇಜುಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬಹುದೋ, ನವೀಕರಿಸಬಹುದೋ ಅಥವಾ ವ್ಯತ್ಯಸ್ಥಗೊಳಿಸಬಹುದೋ ಆ ನಮೂನೆ ಮತ್ತು ಷರತ್ತುಗಳು;

(ಇಇ) 5ನೇ ಪ್ರಕರಣದ (1)ನೇ ಉಪಪ್ರಕರಣಕ್ಕೆ ಇರುವ ವಿವರಣೆಯ ಉದ್ದೇಶಗಳಿಗಾಗಿ ವಿದೇಶವನ್ನು ನಿರ್ದಿಷ್ಟಪಡಿಸುವುದು;

(ಎಫ್) 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪಾಸ್‌ಪೋರ್ಟ್‌ನ್ನು ನೀಡುವುದಕ್ಕಾಗಿ ಅಥವಾ 5ನೇ ಪ್ರಕರಣದ (1ಎ) ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿದೇಶಕ್ಕೆ ಭೇಟಿ ನೀಡುವುದಕ್ಕಾಗಿ ಪಾಸ್‌ಪೋರ್ಟ್‌ನ್ನು ನೀಡುವುದಕ್ಕೆ ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದಕ್ಕೆ ಅಥವಾ ಪಾಸಪೋರ್ಟ್‌ನ ಅಥವಾ ಪ್ರಯಾಣದ ದಸ್ತಾವೇಜಿನ ಮೇಲೆ ಮಾಡಿರುವ ಯಾವುದೇ ಹಿಂಬರಹವನ್ನು ವ್ಯತ್ಯಸ್ಥಗೊಳಿಸುವುದಕ್ಕೆ ಅಥವಾ ಹೊಸ ಹಿಂಬರಹವನ್ನು ಮಾಡುವುದಕ್ಕೆ ಸಲ್ಲಿಸಿದ ಯಾವುದೇ ಅರ್ಜಿಗೆ ಸಂಬಂಧಿಸಿದಂತೆ ಸಂದಾಯಮಾಡಬೇಕಾದ ಫೀಜು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪೀಲಿನ ಸಂಬಂಧದಲ್ಲಿ ಸಂದಾಯಮಾಡಬೇಕಾದ ಫೀಜು;

(ಜಿ) 11ನೇ ಪ್ರಕರಣದ (1)ನೇ ಉಪಪ್ರಕಣದ ಮೇರೆಗೆ ಅಪೀಲು ಪ್ರಾಧಿಕಾರಿಗಳ ನೇಮಕ, ಅಂತಹ ಅಪೀಲು ಪ್ರಾಧಿಕಾರಿಗಳ ಅಧಿಕಾರ ವ್ಯಾಪ್ತಿ ಮತ್ತು ಅವರು ಯಾವ ಕಾರ್ಯವಿಧಾನವನ್ನು ಅನುಸರಿಸಬೇಕೋ ಆ ಕಾರ್ಯವಿಧಾನ;

(ಹೆಚ್) ಪಾಸ್‌ಪೋರ್ಟ್ ಅಥವಾ ಪ್ರಯಾಣದ ದಸ್ತಾವೇಜಿಗೆ ಸಂಬಂಧಿಸಿದಂತೆ ಯಾವ ಸೇವೆಗಳನ್ನು ಸಲ್ಲಿಸಬೇಕಾಗಿದೆಯೋ ಆ ಸೇವೆಗಳು (ಕಳೆದುಹೋದ, ಹಾನಿಗೊಂಡ ಅಥವಾ ನಾಶವಾದ ಪಾಸ್‌ಪೋರ್ಟ್‌ಗೆ ಅಥವಾ ಪ್ರಯಾಣದ ದಸ್ತಾವೇಜಿಗೆ ಬದಲಾಗಿ ದ್ವಿಪ್ರತಿ

ಪಾಸ್‌ಪೋರ್ಟನ್ನು ಅಥವಾ ಪ್ರಯಾಣದ ದಸ್ತಾವೇಜನ್ನು ನೀಡುವುದು ಸೇರಿದಂತೆ) ಮತ್ತು ಅದಕ್ಕಾಗಿ ಸಂದಾಯ ಮಾಡಬೇಕಾದ ಫೀಜು;

(ಐ) ಯಾವ ವಿಷಯವನ್ನು ನಿಯಮಿಸಬೇಕಾಗಿದೆಯೊ ಅಥವಾ ನಿಯಮಿಸಬಹುದೊ ಅಥವಾ ಈ ಅಧಿನಿಯಮವು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಿಲ್ಲವೊ ಅಥವಾ ಸಾಕಷ್ಟು ಉಪಬಂಧ ಕಲ್ಪಿಸಿಲ್ಲವೊ ಆ ಯಾವುದೇ ಇತರೆ ವಿಷಯ ಮತ್ತು ಈ ಅಧಿನಿಯಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಯಾವ ಉಪಬಂಧವನ್ನು ಕಲ್ಪಿಸುವುದು ಅವಶ್ಯವೆಂದು ಕೇಂದ್ರ ಸರ್ಕಾರ ಅಭಿಪ್ರಾಯ ಪಡುವುದೊ ಆ ಉಪಬಂಧ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು, ಮತ್ತು ಅದನ್ನು ಹಾಗೆ ಮಂಡಿಸಿದ ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**25. 1920ರ ಅಧಿನಿಯಮ 34ರ ಚಿಕ್ಕ ಹೆಸರಿನ ಬದಲಾವಣೆ.–** ಭಾರತೀಯ ಪಾಸ್‌ಪೋರ್ಟ್ ಅಧಿನಿಯಮ, 1920ರ 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, "ಭಾರತೀಯ ಪಾಸ್‌ಪೋರ್ಟ್ ಅಧಿನಿಯಮ, 1920" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ, "ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**26.** [ಬಿಟ್ಟು ಬಿಡಲಾಗಿದೆ]

**27. ನಿರಸನ ಮತ್ತು ಉಳಿಸುವಿಕೆ.–** (1) ಪಾಸ್‌ಪೋರ್ಟ್‌ಗಳ ಅಧ್ಯಾದೇಶ, 1967 (1967ರ 04) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಅಥವಾ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯವನ್ನು ಅಥವಾ ಯಾವುದೇ ಕ್ರಮವನ್ನು 1967, ಮೇ 5ರಂದು ಈ ಅಧಿನಿಯಮವು ಪ್ರಾರಂಭವಾಗಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

********